**<u>ದಿನಾಂಕಃ 01-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ ಎಂ ಬಿ ವಕೀಲರಿಂದಃ</u>**

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಆ ದಿನ ಮೋಟಾರ್ ಸೈಕಲ್ ಸಂಖ್ಯೆ ಕೆ ಎ 17 ಇ ಎಂ 3332 ನೇದ್ದರಲ್ಲಿ ಹಿಂಬದಿ ಸವಾರಳಾಗಿ ಹೋಗುತ್ತಿದ್ದೆನು. ನನ್ನ ತಮ್ಮ ಬೈಕ್ ಚಲಾಯಿಸುತಿದ್ದ. ಅಪಘಾತ ಪಡಿಸಿದ ಕಾರ್ ನಂಬರ್ ನನಗೆ ನೆನಪಿರುವುದಿಲ್ಲ. ಅಪಘಾತದ ದಿನ ನಾವು ಗೋವಿನಕೋವಿಯಿಂದ ಗೊಂದಿಚಟ್ನಹಳ್ಳಿಗೆ ಹೋಗುತ್ತಿದ್ದೆವು. ಅಪಘಾತ ಎ ಕೆ ಕಾಲೋನಿ ಸರ್ಕಲ್ ಹತ್ತಿರ ಆಗಿರುತ್ತದೆ. ನಾವು ಸರ್ಕಲ್ ನ ಹತ್ತಿರ ಎಡಭಾಗದಲ್ಲಿ ಹೋಗುತ್ತಿದ್ದಾಗ ಕಾರ್ ಬಂದು ಡಿಕ್ಕಿ ಪಡಿಸಿ, ಅಪಘಾತ ಆಗಿರುತ್ತದೆ. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸರಿ. ಆ ದಿನ ನನ್ನ ತಮ್ಮ ಬೈಕ್ ಬ್ಯಾಲೆನ್ಸ ತಪ್ಪಿ ಕಾರ್ ಗೆ ಹೋಗಿ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ.

**P.W-2**

2. ಅಪಘಾತವಾದ ತಕ್ಷಣ ನಂಜಪ್ಪ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ದಾವಣಗೆರೆಯ ಎಸ್ ಎಸ್ ಐ ಆಸ್ಪತ್ರೆ ಗೆ ಹೋಗಿರುತ್ತೇನೆ. ನಂತರ ಡಾ. ರಮೇಶ ಪೂಜಾರ ರವರ ಹತ್ತಿರ ಚಿಕಿತ್ಸೆ ಪಡೆದಿರುತ್ತೇನೆ. ನಾನು ನಂಜಪ್ಪ ಆಸ್ಪತ್ರೆಯಲ್ಲಿ 2 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಈ ಬಗ್ಗೆ ನಿಪಿ-22 ಡಿಸ್ಚಾರ್ಜ ಸಮರಿಯಲ್ಲಿ ನಮೂದಿರುತ್ತದೆ ಎಂದರೆ ಸರಿ. ನಿಪಿ-22 ರ ಪ್ರಕಾರ ದಿಃ 13-10-2022 ರಂದು ಅಡ್ಮಿಟ್ ಆಗಿ ದಿಃ 14-10-2022 ರಂದು ಡಿಸ್ಚಾರ್ಜ ಆಗಿರುತ್ತೇನೆ ಎಂದರೆ ಸರಿ. ನನ್ನ ಎಡಗಾಲಿಗೆ ಕ್ರಾಪ್ ಬೆಲ್ಟ್ ಹಾಕಿರುತ್ತಾರೆ. ಆಸ್ಪತ್ರೆಗೆ ಹೋದಾಗ ನನ್ನ ಎಡಗಾಲಿನ ಎಕ್ಸರೆ ಮಾಡಿರುತ್ತಾರೆ. ವೈದ್ಯರು ಎಕ್ಸರೆ ರಿಪೋರ್ಟ ನೋಡಿಯೇ ಚಿಕಿತ್ಸೆ ಕೊಟ್ಟಿರುತ್ತಾರೆ. ಆ ಎಕ್ಸರೆ ರಿಪೋರ್ಟಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಆಸ್ಪತ್ರೆಯಿಂದ ಡಿಸ್ಚಾರ್ಜ ಆದ ನಂತರ ಮರಳಿ ನಂಜಪ್ಪ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುವುದಿಲ್ಲ, ಎಸ್ ಎಸ್ ಐ ಆಸ್ಪತ್ರೆ ಮತ್ತು ಡಾ. ರಮೇಶ ಪೂಜಾರರವರ ಹತ್ತಿರ ಹೋಗಿರುತ್ತೇನೆ.

3. ಅಪಘಾತವಾದ 2 ತಿಂಗಳ ನಂತರ ಡಾ. ರಮೇಶ ಪೂಜಾರ ಹತ್ತಿರ ಹೋಗಿರುತ್ತೇನೆ. ರಮೇಶ ಪೂಜಾರ ಹತ್ತಿರ ಚಿಕಿತ್ಸೆ ಪಡೆದಿದ್ದೇನೆ ಎಂದು ನನ್ನ ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಮಾತ್ರ ನಾನು ಎಸ್ ಎಸ್ ಐ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ರಮೇಶ ಪೂಜಾರ ರವರ ಬಳಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಎಕ್ಸರೆ ಪಿಲ್ಮಗಳನ್ನು ಮಾತ್ರ ಹಾಜರು ಪಡಿಸಿರುತ್ತೇನೆ ಹೊರತು ರಿಪೋರ್ಟಗಳನ್ನು ಹಾಜರು ಪಡಿಸಿರುವುದಿಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲದೇ ಇದ್ದರೂ ಸಹ ನಿಪಿ–27 ರಂತೆ ಖೊಟ್ಟಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ ಗಳು ಸಹ ಖೊಟ್ಟಿ ಬಿಲ್ ಗಳಾಗಿರುತ್ತವೆ ಎಂದರೆ ಸರಿಯಲ್ಲ. ಆಸ್ಪತ್ರೆ ಯ ಖರ್ಚಿಗೆ 1 ಲಕ್ಷ 30 ಸಾವಿರ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಕೃಷಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ತಿಂಗಳಿಗೆ 25 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನನಗೆ 40 ರಿಂದ 45 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 36 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ. ಅಪಘಾತ ರಸ್ತೆಯ ಮಧ್ಯದಲ್ಲಿ ನನ್ನ ತಮ್ಮನ ತಪ್ಪಿನಿಂದಲೇ ಆಗಿರುವುದರಿಂದ ಇನ್ಸುರೆನ್ಸ ಕಂಪನಿಯವರು ಯಾವುದೇ ಪರಿಹಾರ ಕೊಡಲು

ಬಾಧ್ಯರಲ್ಲ ಎಂದರೆ ಸರಿಯಲ್ಲ ಹಾಗೂ ಕಾರ್ ಚಾಲಕನಿಗೆ ಯಾವುದೇ ಡ್ರೈವಿಂಗ್ ಲೈಸನ್ಸ ಇರಲಿಲ್ಲ ಆದ್ದರಿಂದ 2 ನೇ ಎದುರುದಾರರ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾದಾ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.